**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **95/2024**

ಸಾಕ್ಷಿದಾರರ ಹೆಸರು - ಪ್ರಶಾಂತ ಪಿಡಬ್ಲೂ - 14
ತಂದೆಯ ಹೆಸರು - ಲೋಕಪ್ಪ ಸಿಡಬ್ಲೂ - 16
ವಯಸ್ಸು - 34 ವರ್ಷ
ಉದ್ಯೋಗ - ಸಹಾಯಕ ಅಭಿಯಂತರರು, ಮೆಸ್ಕಾಂ, ಚಿಕ್ಕಮಗಳೂರು
ವಾಸ ಸ್ಥಳ - ಚಿಕ್ಕಮಗಳೂರು

*(*ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

ದಿನಾಂಕಃ 29-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿಃ 18-03-2024 ರಿಂದ ಚಿಕ್ಕಮಗಳೂರು ಮೆಸ್ಕಾಂ ಇಲಾಖೆಯ ಕಾರ್ಯ ಮತ್ತು ಪಾಲನಾ ಶಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 13-05-2024 ರಂದು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ನಮ್ಮ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರಿಗೆ ಮನವಿಯನ್ನು ಸಲ್ಲಿಸಿ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 77/2024 ಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ ಮತ್ತು ಭಾರತ್‌ಮಾತಾ ಕಾಫಿ ವರ್ಕ್ಸ್ ಮುಂಭಾಗ ಫುಟಪಾತ್ ರಸ್ತೆ ಮತ್ತು ಅದಕ್ಕೆ ಹೊಂದಿಕೊಂಡಿರುವ ಐ.ಜಿ ರಸ್ತೆಯಲ್ಲಿ ದಿಃ 10-05-2024 ರ ಬೆಳಗಿನ ಜಾವ 2 ರಿಂದ 3 ಗಂಟೆಯ ಅವಧಿಯಲ್ಲಿ ವಿದ್ಯುತ್ ಸರಬರಾಜು ಆಗುತ್ತಿತ್ತೆ ಎಂದು ಮಾಹಿತಿ ನೀಡಲು ಕೋರಿದ್ದರು. ಸದರಿ ಮನವಿಯನ್ನು ಅದೇ ದಿನ ನಮ್ಮ ಕಛೇರಿಯಲ್ಲಿ ಸ್ವೀಕರಿಸಲಾಗಿರುತ್ತದೆ. ಸದರಿ ಮನವಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.32 ಎಂದು ಗುರುತಿಸಲಾಗಿದೆ.

3. ಸದರಿ ಮನವಿಯ ಮೇರೆಗೆ ಜೈಲ್ ರೋಡ್ ಫೀಡರ್ ಉಪ ಶಾಖೆಯಲ್ಲಿ ನಿರ್ವಹಿಸಲಾಗಿರುವ ಲಾಗ್ ಪುಸ್ತಕದ ಎಕ್ಸಟ್ರಾಕ್ಟ್ ನ್ನು ಪಡೆದು ಪರಿಶೀಲಿಸಿ ಅದರ ಮೇರೆಗೆ ಮೇಲೆ ಹೇಳಿದ ಸ್ಥಳದಲ್ಲಿ ದಿಃ 10-05-2024 ರ ಬೆಳಗಿನ ಜಾವ 2 ಗಂಟೆಯಿಂದ 3 ಗಂಟೆ ವೇಳೆಯಲ್ಲಿ ವಿದ್ಯುತ್ ಚಾಲನೆ ಇತ್ತು ಎಂದು ತಿಳಿಸಿ ದಿಃ 15-05-2024 ರಂದು ನಾನು ಪೊಲೀಸರಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ಅದನ್ನು ಸಂಬಂಧಿಸಿದ

ಪೊಲೀಸರು ದಿಃ 06-07-2024 ರಂದು ನಮ್ಮ ಕಛೇರಿಯಿಂದ ಪಡೆದಿರುತ್ತಾರೆ. ಸದರಿ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಸದರಿ ವರದಿಯನ್ನು ನಿಪಿ.36 ಎಂದು, ಸಾಕ್ಷಿಯ ಸಹಿಯನ್ನು ನಿಪಿ.36(ಎ) ಎಂದು ಗುರುತಿಸಲಾಯಿತು.

4. ಸಾಕ್ಷಿಯು ಲಾಗ್ ಪುಸ್ತಕದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.37 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿಃ **LADCS** ನ **Deputy Chief Defense counsel** ಆದ ಶ್ರೀ ಎನ್.ಡಿ ವಕೀಲರಿಂದಃ</u>

5. ನೀವು ನೀಡಿದ ವರದಿಯನ್ನು ಪೊಲೀಸರು ದಿಃ 15-05-2024 ರಂದೇ ಪಡೆದುಕೊಂಡರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಪಿ.36 ರಲ್ಲಿ ಜೈಲ್ ರೋಡ್ ಉಪ ಶಾಖೆಯ ಲಾಗ್ ಪುಸ್ತಕವನ್ನು ಪಡೆದು ಪರಿಶೀಲಿಸಿದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ.

6. ನಿಪಿ.37 ನ್ನು ನೀವು ಪೊಲೀಸರಿಗೆ ನೀಡಿಲ್ಲ ಮತ್ತು ಅವರು ಅದನ್ನು ಪರಿಶೀಲಿಸಿಲ್ಲ ಎಂದರೆ ಸರಿ. ಲಾಗ್ ಪುಸ್ತಕ ಉಪಕೇಂದ್ರದ ಸುಪರ್ದಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಉಪಕೇಂದ್ರದ ಮೇಲೆ ನಿಮಗೆ ಯಾವುದೇ ನಿಯಂತ್ರಣ

ಇರುವುದಿಲ್ಲ ಎಂದರೆ ಸಾಕ್ಷಿ ನಿಯಂತ್ರಣ ಇರುವುದಿಲ್ಲ ಆದರೆ ಅವರು ನಮ್ಮನ್ನು ಕೇಳಿಯೇ ವಿದ್ಯುತ್ ಸರಬರಾಜನ್ನು ಆನ್ ಮತ್ತು ಆಫ್ ಮಾಡುತ್ತಾರೆ ಎನ್ನುತ್ತಾರೆ. ನಿಪಿ.37 ದಾಖಲೆಯನ್ನು ಒಳಗೊಂಡ ಲಾಗ್ ಪುಸ್ತಕ ಒಟ್ಟು ಎಷ್ಟು ಪುಟಗಳನ್ನು ಹೊಂದಿದೆ ಎಂದರೆ ಸಾಕ್ಷಿ ಅಂದಾಜು 500 ಎನ್ನುತ್ತಾರೆ. ಸದರಿ ಪುಸ್ತಕವನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಅದು ಎ-2 ಹಾಳೆಯ ದೊಡ್ಡ ಪುಸ್ತಕ ಹಾಗಾಗಿ ಅದನ್ನು ಹಾಜರುಪಡಿಸುವುದು ಕಷ್ಟವಾಗುತ್ತದೆ ಮತ್ತು ಅದು ಈಗಲೂ ಸಹ ಚಾಲ್ತಿಯಲ್ಲಿರುವ ಕಾರಣ ನಮ್ಮ ದಿನನಿತ್ಯದ ಕೆಲಸಕ್ಕೆ ಅದರ ಅವಶ್ಯಕತೆ ಇದೆ ಎನ್ನುತ್ತಾರೆ. ನಿಪಿ.37 ದಾಖಲೆಯನ್ನು ನೀವು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಂತರದಲ್ಲಿ ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನೀವು ಲಾಗ್ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

7. ನೀವು ಪೊಲೀಸರ ಕೋರಿಕೆಯ ಮೇರೆಗೆ ನೀವು ಹೇಳಿದ ಸ್ಥಳ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇತ್ತು ಎಂದು ನಿಪಿ.36 ಮತ್ತು ಪಿ.37 ರಂತೆ ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ